ದೂರವಾಣಿ : 080-22241813 ಮೊಬೈಲ್ : 8277454813

# ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ

ಕೆ.ಆರ್. ವೃತ್ತ, ಬೆಂಗಳೂರು – 560 001

(ನೋಂದಣಿ ಸಂಖ್ಯೆ 1998/ಆರ್.ಸಿ.ಎಸ್./1964)

## ಮಹಾಸಭೆ ತಿಳುವಳಿಕೆ ಪತ್ರ

ಸಂಘದ ಸರ್ವಸದಸ್ಯರ 45ನೇ ಮಹಾಸಭೆಯನ್ನು ದಿನಾಂಕ 31–08–2025ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಇಂಜಿನೀಯರಿಂಗ್ ಸರ್ವೀಸ್ ಅಸೋಶಿಯೇಷನ್ ಪಿ.ಡಬ್ಲ್ಯೂ.ಡಿ. ಕಾಂಪೌಂಡ್, ಕೆ.ಆರ್.ವೃತ್ತ, ಬೆಂಗಳೂರು. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ನಟರಾಜ್ .ಎಂ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳು ಈ ವಾರ್ಷಿಕ ಸರ್ವಸದಸ್ಯರ ಸಭೆಗೆ ತಪ್ಪದೇ ಹಾಜರಾಗಿ 45ನೇ ಮಹಾಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

### ಕಾರ್ಯಕ್ರಮಗಳು

1. ಪ್ರಾರ್ಥನೆ.
2. ಮೃತಪಟ್ಟಿರುವ ಸಂಘದ ಸದಸ್ಯರಿಗೆ ಸಂತಾಪ ಸೂಚಿಸುವುದು.
3. ಸ್ವಾಗತ ಭಾಷಣ.
4. 45ನೇ ಮಹಾಸಭೆ ಉದ್ಘಾಟನೆ.
5. ಗೌರವ ಕಾರ್ಯದರ್ಶಿಯವರಿಂದ 2024–25ನೇ ಸಾಲಿನ ಆಡಳಿತ ವರದಿ ಮಂಡನೆ.
6. ನಿವೃತ್ತ ಸದಸ್ಯ ನೌಕರರುಗಳಿಗೆ ಸನ್ಮಾನ.
7. ಮರಣ ಹೊಂದಿದ ಸದಸ್ಯರ ಕುಟುಂಬದವರಿಗೆ ಸನ್ಮಾನ
8. ಪ್ರತಿಭಾ ಪುರಸ್ಕಾರ.
9. ಉದ್ಘಾಟಕರು ಹಾಗೂ ಮುಖ್ಯ ಅತಿಥಿಗಳಿಂದ ಭಾಷಣ.
10. ಅಧ್ಯಕ್ಷರ ಭಾಷಣ.
11. ಮುಖ್ಯ ಅತಿಥಿಗಳಿಗೆ ಸನ್ಮಾನ ಮತ್ತು ಬೀಳ್ಕೊಡುಗೆ, ನಂತರ ಮಹಾಸಭೆ ಕಾರ್ಯಕಲಾಪ ಪ್ರಾರಂಭ.
12. ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
13. 44ನೇ ಮಹಾಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವುದು.
14. 2024–25ನೇ ಸಾಲಿನ ಲೆಕ್ಕಪತ್ರ ಮತ್ತು ಲಾಭಾಂಶ ವಿಂಗಡಣೆಗೆ ಅನುಮೋದನೆ.
15. 2026–27ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.
16. 2025–26ನೇ ಸಾಲಿಗೆ ಲೆಕ್ಕಪರಿಶೋಧಕರ ಆಯ್ಕೆ ಬಗ್ಗೆ.
17. ಈ ಹಿಂದೆ 3 ವರ್ಷದಿಂದ ಲಾಭಾಂಶವನ್ನು ಪಡೆಯದವರ ಲಾಭಾಂಶವನ್ನು ಆರ್.ಎಫ್.ಡಿ. ಖಾತೆಗೆ ವರ್ಗಾಯಿಸುವ ಬಗ್ಗೆ.
18. ಬೈಲಾ ತಿದ್ದುಪಡಿಗಾಗಿ
19. ಮಾನ್ಯ ಸದಸ್ಯರುಗಳಿಂದ ಬಂದ ಸಲಹೆ ಸೂಚನೆಗಳ ಮೇಲೆ ಚರ್ಚೆ
20. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ಬಗ್ಗೆ ಚರ್ಚೆ.
21. ವಂದನಾರ್ಪಣೆ.

ಕಾರ್ಯಕಾರಿ ಮಂಡಲಿಯ ಪರವಾಗಿ,

ವೆಂಕಟೇಶ್ ಎಲ್.
ಗೌ॥ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 01–08–2025

# ಸದಸ್ಯರುಗಳಲ್ಲಿ ಮನವಿ

1. ಸದಸ್ಯರುಗಳು ಮಹಾಸಭೆಗೆ ಹಾಜರಾದ ಕೂಡಲೇ ಸರ್ವಸದಸ್ಯರ ಸಭೆಯ ಹಾಜರಾತಿ ಪುಸ್ತಕದಲ್ಲಿ ಹೆಸರು, ಹುದ್ದೆ ಮತ್ತು ಕಛೇರಿ ಹೆಸರು ನಮೂದಿಸಿ ಸಹಿ ಮಾಡುವುದು.

2. ಸರ್ವಸದಸ್ಯರ ಮಹಾಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚಿಸಬಯಸುವವರು ಲಿಖಿತ ಮೂಲಕ ಸಂಘದ ಕಾರ್ಯದರ್ಶಿಯವರಿಗೆ ದಿನಾಂಕ 22-08-2025ರ ಸಂಜೆ 5 ಘಂಟೆಯೊಳಗೆ ಸಲ್ಲಿಸಲು ಕೋರಿದೆ.

3. ಸರ್ವಸದಸ್ಯರ ಮಹಾಸಭೆಗೆ ಹಾಜರಾಗುವ ಎಲ್ಲಾ ಸದಸ್ಯರು ತಪ್ಪದೇ ಈ ಮಹಾಸಭೆ ತಿಳುವಳುಕೆ ಪತ್ರ ತಮ್ಮ ಸಂಗಡ ತರಬೇಕಾಗಿ ಕೋರಿದೆ.

4. ಸಂಘದಲ್ಲಿ ನಗದು ರಹಿತ ವ್ಯವಹಾರ ಮಾಡುತ್ತಿರುವುದರಿಂದ ಲಾಭಾಂಶವನ್ನು ಸದಸ್ಯರ ಉಳಿತಾಯ ಖಾತೆಗೆ ವರ್ಗಾವಣೆ ಮಾಡುತ್ತಿರುವುದರಿಂದ ಸದಸ್ಯರು ಉಳಿತಾಯ ಖಾತೆಯ ಮಾಹಿತಿಯನ್ನು ಮತ್ತು ಕೆಜಿಐಡಿ ನಂಬರ್ ನೀಡಬೇಕೆಂದು ಕೋರಿದೆ.

5. ಗುರುತಿನ ಚೀಟಿಯನ್ನು ಪಡೆಯದ ಸದಸ್ಯರು 2 ಸ್ಟಾಂಪ್ ಸೈಜ್‌ನ ಭಾವಚಿತ್ರವನ್ನು ನೀಡಿ ಕೂಡಲೇ ಗುರುತಿನ ಚೀಟಿಯನ್ನು ಪಡೆಯಲು ಕೋರಿದೆ.

6. ಸದಸ್ಯರ ವಿಳಾಸದಲ್ಲಿ ಮತ್ತು ದೂರವಾಣಿ ಸಂಖ್ಯೆಯಲ್ಲಿ ಬದಲಾವಣೆ ಇದ್ದಲ್ಲಿ ಬದಲಾದ ವಿಳಾಸವನ್ನು ಮತ್ತು ಮೊಬೈಲ್ ನಂಬರನ್ನು ಸಂಘಕ್ಕೆ ಪತ್ರ ಬರೆದು ತಿಳಿಸಬೇಕು.

7. ಹೊಸದಾಗಿ ನೇಮಕಗೊಂಡಿರುವ ಇಲಾಖಾ ನೌಕರರನ್ನು ಸಂಘದಲ್ಲಿ ಸದಸ್ಯತ್ವ ಪಡೆಯಲು ಪ್ರೋತ್ಸಾಹಿಸುವುದು.

8. ಹಾಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಎಸ್. ಬಿಲ್ಡಿಂಗ್ ಬ್ರಾಂಚ್‌ನಲ್ಲಿ ಚಾಲ್ತಿ ಖಾತೆಯ ಸಂಖ್ಯೆ (C.A.64051596095)ನ್ನು ತೆರೆದಿರುವುದರಿಂದ ರಾಜ್ಯದ ಯಾವುದೇ ಭಾಗದಲ್ಲಿದ್ದರೂ ಸದಸ್ಯರು ನೇರವಾಗಿ ಈ ಖಾತೆಗೆ ಸಾಲದ ಕಂತನ್ನು ಪಾವತಿಸಬಹುದಾಗಿದೆ. (IFSC Code-SBIN0040526)

   [2024-25ನೇ ಸಾಲಿನ ಸಹಕಾರ ಸಂಘದ ಲೆಕ್ಕಪರಿಶೋಧನಾ ವರದಿ ಸಹಕಾರ ಸಂಘದ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಅಥವಾ ಸಂಘದ ಹೆಸರಿನಲ್ಲಿರುವ website : www.sslrcoopratívesociety.in ನಲ್ಲಿ ಪ್ರಕಟಿಸಲಾಗಿದ್ದು ಪರಿಶೀಲಿಸಬಹುದಾಗಿದೆ.]

## ತಿಳುವಳಿಕೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಇತ್ತೀಚಿನ ತಿದ್ದುಪಡಿಯಂತೆ ಸಹಕಾರ ಸಂಘದ ಪ್ರತಿಯೊಬ್ಬ ಸದಸ್ಯರು ಆ ಸಹಕಾರ ಸಂಘದ ವ್ಯವಸ್ಥಾಪನೆಯಲ್ಲಿ ಮತ್ತು ಕಾರ್ಯ ಚಟುವಟಿಕೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದಸ್ಯರುಗಳು ಸಂಘದ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಎಲ್ಲಾ ಸದಸ್ಯರುಗಳಿಗೆ ವಿನಂತಿಸಲಾಗಿದೆ.

1. ಸಾಲಪಡೆದ ಸದಸ್ಯರು ನಿಗದಿಪಡಿಸಿದ ಅವಧಿಯಲ್ಲಿ ಸಾಲವನ್ನು ಮರುಪಾವತಿ ಮಾಡಬೇಕು.
2. ಜಾಮೀನುದಾರರು ಸಾಲಗಾರರಷ್ಟೇ ಸಾಲದ ಹಣಕ್ಕೆ ಜವಾಬ್ದಾರರಾಗಿರುತ್ತಾರೆ.
3. ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ವರ್ಗಾವಣೆಯಾದಲ್ಲಿ ಸದರಿ ಕಛೇರಿಯ ವಿಳಾಸವನ್ನು ಕೂಡಲೇ ಸಂಘಕ್ಕೆ ತಿಳಿಸುವುದು.
4. ನಾಮ ನಿರ್ದೇಶನ ಬದಲಾವಣೆಯಾದಲ್ಲಿ ಸಂಘಕ್ಕೆ ಲಿಖಿತವಾಗಿ ತಿಳಿಸುವುದು.
5. ಸಾಲವಸೂಲಾತಿ ತಃಖ್ತೆ ಮತ್ತು ರಶೀದಿ ತಲುಪದಿರುವುದು ಸಾಲ ಮರುಪಾವತಿ ಮಾಡದಿರುವುದಕ್ಕೆ ಸಕಾರಣವಲ್ಲ.

| ಆರ್.ಡಿ. ಖಾತೆಗೆ ನೀಡಲಾಗುತ್ತಿರುವ ಬಡ್ಡಿದರ | | ತ್ರಿಫ್ಟ್ ಠೇವಣಿ ಖಾತೆಗೆ ನೀಡಲಾಗುತ್ತಿರುವ ಬಡ್ಡಿದರ |
|---|---|---|
| 2 ವರ್ಷದ ಅವಧಿಗೆ | ಶೇಕಡಾ 7.5 | ಶೇಕಡಾ 8 |
| 3 ವರ್ಷದ ಅವಧಿಗೆ | ಶೇಕಡಾ 8 | |

## ಬೈಲಾ ತಿದ್ದುಪಡಿ

| ಉಪನಿಬಂಧನೆಯ ಸಂಖ್ಯೆ | ಉಪನಿಬಂಧನೆಯ ಪದಗಳು ಈಗ ಇರುವಂತೆ | ತಿದ್ದುಪಡಿಗಾಗಿ ಪ್ರಸ್ತಾಪಿಸಲಾಗಿರುವ ಉಪನಿಬಂಧನೆಯ ಪದಗಳು | ತಿದ್ದುಪಡಿಗೆ ಕಾರಣಗಳು |
|---|---|---|---|
| 70 (ಅ) | ಈ ಮುಂದೆ ಸೂಚಿಸಿರುವ ಸಾಲಗಳನ್ನು ಆಡಳಿತ (ನಿರ್ದೇಶಕ) ಮಂಡಳಿಯ ಒಪ್ಪಿಗೆ ಮೇರೆಗೆ ನೀಡಬಹುದು ಸ್ಥಿರಾಸ್ತಿಯ ಭದ್ರತೆಯನ್ನು ಆಧರಿಸಿದ ಸಾಲಗಳನ್ನು ಮನೆ ಖರೀದಿಗಾಗಿ, ಗೃಹ ನಿರ್ಮಾಣ / ಮನೆಗಳು / ಫ್ಲಾಟುಗಳ ಖರೀದಿ ಮಾಡಲು 120 ಮಾಸಿಕ ಕಂತುಗಳಲ್ಲಿ ಮರು ಸಂದಾಯವಾಗುವಂತೆ ರೂ.10,00,000 (ಹತ್ತು ಲಕ್ಷ ರೂಪಾಯಿಗಳು) ಗರಿಷ್ಠ ಮೊತ್ತಕ್ಕೆ ಒಳಪಟ್ಟು ಕಟ್ಟಡ / ನಿವೇಶನ ಮೌಲ್ಯದ ಶೇ.75ರವರೆಗೆ ಮತ್ತು ಇರುವ ಕಟ್ಟಡಕ್ಕೆ ಹೆಚ್ಚುವರಿ ರಚನೆಗಳನ್ನು ಸೇರಿಸಲು ಮತ್ತು ಅದಕ್ಕೆ ವ್ಯತ್ಯಾಸಗಳನ್ನು ಮಾಡುವುದಕ್ಕಾಗಿ ರೂ.5,00,000 (ಐದು ಲಕ್ಷ ರೂಪಾಯಿಗಳು) ಸಾಲಗಳನ್ನು ನೀಡತಕ್ಕದ್ದು. | ಈ ಮುಂದೆ ಸೂಚಿಸಿರುವ ಸಾಲಗಳನ್ನು ಆಡಳಿತ (ನಿರ್ದೇಶಕ) ಮಂಡಳಿಯ ಒಪ್ಪಿಗೆ ಮೇರೆಗೆ ನೀಡಬಹುದು. ಸ್ಥಿರಾಸ್ತಿಯ ಭದ್ರತೆಯನ್ನು ಆಧರಿಸಿದ ಸಾಲಗಳನ್ನು ಗೃಹ ನಿರ್ಮಾಣಕ್ಕಾಗಿ 180 ಮಾಸಿಕ ಕಂತುಗಳಲ್ಲಿ ಮರು ಸಂದಾಯವಾಗುವಂತೆ ರೂ.25,00,000 (ಇಪ್ಪತ್ತೈದು ಲಕ್ಷ ರೂಪಾಯಿಗಳು) ಗರಿಷ್ಠ ಮೊತ್ತಕ್ಕೆ ಒಳಪಟ್ಟು ಕಟ್ಟಡ/ನಿವೇಶನ ಮೌಲ್ಯದ ಶೇ.75ರವರೆಗೆ ಮತ್ತು ಇರುವ ಕಟ್ಟಡಕ್ಕೆ ಹೆಚ್ಚುವರಿ ರಚನೆಗಳನ್ನು ಸೇರಿಸಲು ಮತ್ತು ಅದಕ್ಕೆ ವ್ಯತ್ಯಾಸಗಳನ್ನು ಮಾಡುವುದಕ್ಕಾಗಿ ರೂ.10,00,000 (ಹತ್ತು ಲಕ್ಷ ರೂಪಾಯಿಗಳು) ಸಾಲಗಳನ್ನು ನೀಡತಕ್ಕದ್ದು. | ಸದಸ್ಯರ ಅನುಕೂಲಕ್ಕಾಗಿ ಮತ್ತು ಸಂಘದ ಅಭಿವೃದ್ಧಿಗಾಗಿ |
| 71 (1) | ಸಂಘದ ಒಬ್ಬ ಸದಸ್ಯನಿಗೆ ಉಪ ನಿಂಧನೆಗಳನ್ವಯ ಕೊಡಬಹುದಾದ ಎಲ್ಲಾ ಸಾಲಗಳ ಒಟ್ಟು ಮೊತ್ತ ಗರಿಷ್ಠ ರೂ.15,00,00-00 (ಹದಿನೈದು ಲಕ್ಷ ರೂಪಾಯಿಗಳು) ಗಳ ಪರಿಮಿತಿಗೆ ಒಳಪಟ್ಟು ಇರತಕ್ಕದ್ದು. | ಸಂಘದ ಒಬ್ಬ ಸದಸ್ಯನಿಗೆ ಉಪ ನಿಂಧನೆಗಳನ್ವಯ ಕೊಡಬಹುದಾದ ಎಲ್ಲಾ ಸಾಲಗಳ ಒಟ್ಟು ಮೊತ್ತ ಗರಿಷ್ಠ ರೂ. 30,00,000-00 (ಮೂವತ್ತು ಲಕ್ಷ ರೂಪಾಯಿಗಳು) ಗಳ ಪರಿಮಿತಿಗೆ ಒಳಪಟ್ಟು ಇರತಕ್ಕದ್ದು. | ಸದಸ್ಯರ ಅನುಕೂಲಕ್ಕಾಗಿ ಮತ್ತು ಸಂಘದ ಅಭಿವೃದ್ಧಿಗಾಗಿ |

| | | | |
|---|---|---|---|
| 112(ಅ) | ಸಾಂದರ್ಭಿಕ ರಜೆ : ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ನೌಕರನಿಗೆ 15 (ಹದಿನೈದು) ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳತಕ್ಕದಲ್ಲ. ಸಾಮಾನ್ಯವಾಗಿ ಒಂದು ಸಲಕ್ಕೆ ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ ಏಳು(7) ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕದಲ್ಲ. | ಸಾಂದರ್ಭಿಕ ರಜೆ : ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ನೌಕರನಿಗೆ 10 (ಹತ್ತು) ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳತಕ್ಕದಲ್ಲ. ಸಾಮಾನ್ಯವಾಗಿ ಒಂದು ಸಲಕ್ಕೆ ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ ಏಳು(7) ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕದಲ್ಲ. ರಾಜ್ಯ ಸರ್ಕಾರವು ತನ್ನ ನೌಕರರಿಗೆ ಕಾಲಕಾಲಕ್ಕೆ ಪರಿಷ್ಕರಿಸುವ ರಜೆಗಳನ್ನು ಅನುಮತಿಸತಕ್ಕದು. | ಆಡಳಿತ ಮಂಡಳಿಯ ತೀರ್ಮಾನದಂತೆ |
| 106(ಅ) | ಸಂಘದ ಆರ್ಥಿಕ ಪರಿಸ್ಥಿತಿ, ಲಾಭದಾಯಕತೆ ಮತ್ತು ವ್ಯವಹಾರ ಅಭಿವೃದ್ಧಿಗಳನ್ನು ಪ್ರತಿ ಸಿಬ್ಬಂದಿಗೆ ಕಾಲಕಾಲಕ್ಕೆ ಕೊಡಬಹುದಾದ ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳನ್ನು ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು. | ಸಂಘದ ಆರ್ಥಿಕ ಪರಿಸ್ಥಿತಿ, ಲಾಭದಾಯಕತೆ ಮತ್ತು ವ್ಯವಹಾರ ಅಭಿವೃದ್ಧಿಗಳನ್ನು ಪ್ರತಿ ಸಿಬ್ಬಂದಿಗೆ ಕಾಲಕಾಲಕ್ಕೆ ಕೊಡಬಹುದಾದ ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ತನ್ನ ನೌಕರರಿಗೆ ಮಂಜೂರು ಮಾಡುವ ಎಲ್ಲಾ ಭತ್ಯೆಗಳನ್ನು ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು. | ಆಡಳಿತ ಮಂಡಳಿಯ ತೀರ್ಮಾನದಂತೆ |

ತೆರೆದ-ಅಂಚೆ

ಗೆ,

ಶ್ರೀಮತಿ / ಶ್ರೀ.................................................................ರವರಿಗೆ

ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ

.................................................................ತಾಲ್ಲೂಕು

.................................................................ಜಿಲ್ಲೆ

ಇಂದ :

**ಭೂಮಾಪನ ಕಂದಾಯ ವ್ಯವಸ್ಥೆ ಮತ್ತು**
**ಭೂದಾಖಲೆಗಳ ಇಲಾಖಾ ನೌಕರರ**
**ಪತ್ತಿನ ಸಹಕಾರ ಸಂಘ ನಿಯಮಿತ**

ಕೆ.ಆರ್. ವೃತ್ತ, ಬೆಂಗಳೂರು-560 001
ದೂರವಾಣಿ : 080-22241813 । ಮೊಬೈಲ್ : 8277454813
ಇ-ಮೇಲ್ : sslrcoopsociety@gmail.com
ವೆಬ್ ಸೈಟ್ : www.sslrcooperativesociety.in